**ಸಿ.ಸಿ. ನಂ. 1071/2023**

**ಪಿಡಬ್ಲ್ಯೂ-1**

ದಿಃ29-01-2026 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಟಿ.ಎಲ್.ಎಂ. ವಕೀಲರಿಂದ**

ಆರೋಪಿ ನಮ್ಮ ಸಂಘದ ಸದಸ್ಯರು. ಅವರು ನಾಮಿನಲ್ ಮೆಂಬರ್ ಆಗಿದ್ದರು. ಅವರ ನಂಬರ್ 36. ಅವರು ನಮ್ಮ ಸೊಸೈಟಿಯಲ್ಲಿ ಅಡಿಕೆ ವ್ಯಾಪಾರ ಮಾಡುತ್ತಿದ್ದರು. ಈ ಕೇಸಿನಲ್ಲಿ ಬಾಕಿ ಕೊಡಬೇಕಾದ ಹಣದ ವ್ಯವಹಾರ ಅಡಿಕೆ ಖರೀದಿ ಮಾಡಿದ್ದು ಆಗಿರುತ್ತದೆ. 2007 ರಿಂದ 2013 ರವರೆಗೆ ರೂ.22,22,000/- ಗಳ ಅಡಿಕೆ ಖರೀದಿ ಮಾಡಿದ್ದರು. ಅಡಿಕೆ ಖರೀದಿಗೆ ಸಂಬಂಧಿಸಿದಂತೆ ಈ ಕೇಸಿನಲ್ಲಿ ಹೇಳಿರುವಂತಹ ಬಾಕಿ ಕೊಡಬೇಕಾಗಿರುತ್ತದೆ. ಸಾಕ್ಷಿಗೆ ಆರೋಪಿಯು ನಿಮ್ಮ ಬಳಿ ಸಾಲ ತೆಗೆದುಕೊಂಡಿದ್ದರೇ ಎಂದರೆ ಸಾಕ್ಷಿಯು ಅಡಿಕೆ ಖರೀದಿ ಸಾಲ ಮಾಡಿದ್ದರು ಎಂದು ಹೇಳುತ್ತಾರೆ. ಆರೋಪಿಯು ಅಡಿಕೆ ಖರೀದಿ ಮಾಡಿದ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಅಡಿಕೆಯನ್ನು ತುಂಬ ಹೆಚ್ಚಿನ ಬೆಲೆಗೆ ಖರೀದಿ ಮಾಡಿದ್ದು, ಆರೋಪಿಯು ರೂ.22,22,000/- ಗಳ ಬಾಕಿ ಉಳಿಸಿಕೊಂಡಿದ್ದರು ಎಂದು ಹೇಳುತ್ತಾರೆ. ಅಡಿಕೆ ಖರೀದಿಗೆ ಸಿ ಬಿಲ್ಲುಗಳು ಇರುತ್ತವೆ. ಸದರಿ ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಕಛೇರಿಯಲ್ಲಿರುತ್ತದೆ. ವಿಜಯ ಜಯಪ್ಪ ರವರು ಅಡಿಕೆಯನ್ನು ಖರೀದಿ ಮಾಡಿದ್ದಾರೆ. ಆರೋಪಿ ವಿಜಯ ಜಯಪ್ಪ ರವರು ಕೆಲವು ಬಾರಿ ಟೆಂಡರ್ ಕೊಡುತ್ತಿದ್ದರು. ಕೆಲವು ಬಾರಿ ಅವರ ಕೆಲಸಗಾರರು ಬಂದು ಟೆಂಡರ್ ಕೊಡುತ್ತಿದ್ದರು. ವಿಜಯ ಜಯಪ್ಪ ರವರು ಟೆಂಡರ್ ಕೊಟ್ಟರೆ ಅವರ ಸಹಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರ ಗಂಡ ಜಯಪ್ಪ ಎಂಬುವವರು ಕೂಡ ಅಡಿಕೆ ಖರೀದಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ವಿಜಯ ಜಯಪ್ಪರವರಿಗೆ ಒಂದು ಫರ್ಮ್ ಇದ್ದು, ಆ ಫರ್ಮ್ ಹೆಸರಿನಲ್ಲಿ ಅಡಿಕೆ ಖರೀದಿ ಮಾಡುತ್ತಿದ್ದ್ರು. ಫರ್ಮ್ ನಲ್ಲಿ ಎಷ್ಟು ಜನ ಪಾಲುದಾರರಿದ್ದರು ಎಂದು ಹೇಳಲಾಗುವುದಿಲ್ಲ. ವಿಜಯ

ಜಯಪ್ಪರವರು ಸದರಿ ಹಣವನ್ನು ವೈಯಕ್ತಿಕವಾಗಿ ಮತ್ತು ಅವರ ಫರ್ಮ್ ಆಧಾರದ ಮೇಲೆ ಕೊಡಬೇಕು. ಸದರಿ ಮೇಲೆ ಹೇಳಿದ ವಿಚಾರಗಳನ್ನು ನನ್ನ ಪಿರ್ಯಾದಿಯಲ್ಲಿ ಮತ್ತು ಪ್ರಮಾಣ ಪತ್ರಿಕೆಯಲ್ಲಿ ಹೇಳಿರುತ್ತೇನೆ. ನಮ್ಮಲ್ಲಿ ಖರೀದಿ ಮಾಡಿದ ಅಡಿಕೆಗೆ ಸಂಬಂಧಿಸಿದಂತಹ ಹಣವನ್ನು ವಿಜಯ ಜಯಪ್ಪರವರು ಅಕೌಂಟ್ ಮೂಲಕ ಹಾಕುತ್ತಿದ್ದರು. ಕೆಲವು ಸಮಯದಲ್ಲಿ ನಗದು ರೂಪದಲ್ಲೂ ಕೊಡುತ್ತಿದ್ದರು. ನಾವು ಸಾಲ ಕೊಡುವಾಗ ಅವರ ಖಾತೆಗೆ ಹಣವನ್ನು ಜಮಾ ಮಾಡುತ್ತೇವೆ. ಸಾಕ್ಷಿ ಮುಂದುವರಿದು ಆರೋಪಿಯು ಅಡಿಕೆ ಖರೀದಿದಾರರಾಗಿರುವುದರಿಂದ ನಾವು ಅವರಿಗೆ ಸಿ ಬಿಲ್ ನೋಡುತ್ತೇವೆ, ನಾವು ಅವರಿಗೆ ಹಣ ಕೊಡುತ್ತೇವೆ ಎಂದು ಹೇಳುತ್ತಾರೆ. ವಿಜಯ ಜಯಪ್ಪರವರ ಖಾತೆಯು ವೈಯಕ್ತಿಕವಾಗಿಲ್ಲ, ಆದರೆ ಫರ್ಮ್ ಹೆಸರಿನಲ್ಲಿದೆ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

**ತೆ ನ್ಯಾ ಬೆ ಮಾಡಲಾಯಿತು.**

**ಓ ಹೇ ಕೇ ಸರಿಯಿದೆ.**

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**